RNU AIR DHARWAD

NOVEMBER 22, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ದೇಶದ 140 ಕೋಟಿ ಜನರಿಗೆ, ಆಹಾರ ಭದ್ರತೆ ಒದಗಿಸುವ ಮಹತ್ವದ ಕ್ಷೇತ್ರವಾಗಿರುವ ಕೃಷಿಯಲ್ಲಿ, ಹೆಚ್ಚಿನ ಉತ್ಪಾದನೆಯೊಂದಿಗೆ, ಮೌಲ್ಯವರ್ಧನೆ, ಮಾರುಕಟ್ಟೆ ವಿಸ್ತರಣೆ ಹಾಗೂ ಆಹಾರ ಸಂಸ್ಕರಣೆಗೆ ಆದ್ಯತೆ ನೀಡಬೇಕಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದರು. ಗದಗ ನಗರದ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ವಿಶ್ವವಿದ್ಯಾಲಯದಲ್ಲಿ, ಆಯೋಜಿತ, 'ಕೃಷಿ ಉದ್ಯಮ ಮತ್ತು ಆಹಾರ ಸಂಸ್ಕರಣೆ ಕಾನೂನು ವ್ಯವಸ್ಥೆ; ದೃಷ್ಟಿಕೋನಗಳು ಮತ್ತು ಸವಾಲುಗಳು', ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಸಂಘಟಿತ ಮಾರುಕಟ್ಟೆ, ಉದ್ಯಮಶೀಲತೆ ಮೂಲಕ ರೈತರ ಆದಾಯ ಹೆಚ್ಚಿಸುವತ್ತ ಗಮನ ಹರಿಸಬೇಕಿದೆ ಎಂದರು.

<><><>

ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಸಂಪರ್ಕ ಯೋಜನೆ ಹಾಗೂ ಮುಖ್ಯಮಂತ್ರಿ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಗದಗ ಜಿಲ್ಲೆಗೆ, 250 ಕೋಟಿ ರೂಪಾಯಿ ಅನುದಾನ ಸಿಗಲಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಬರದ ಹಿನ್ನೆಲೆ, ವಿಕಸಿತ ಭಾರತ ಜಿ ರಾಮ ಜಿ ಯೋಜನೆಯಡಿ, ಕೆಲಸದ ಗರಿಷ್ಠ ಮಿತಿಯನ್ನು, 125 ರಿಂದ 175 ದಿನಗಳಿಗೆ, ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದ್ದಾರೆ.

<><><>

ರಾಜ್ಯಾದ್ಯಂತ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಿದೆ. ರಾಜ್ಯದ ವಿವಿಧೆಡೆಗಳಲ್ಲಿ, ಸುಮಾರು 13 ಸಿಂಥೆಟಿಕ್ ಟ್ರ್ಯಾಕ್‌ಗಳನ್ನು ಹೊಂದಿರುವ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಪ್ರತಿ ಜಿಲ್ಲಾ ಕ್ರೀಡಾಂಗಣಗಳಲ್ಲೂ ಸಿಂಥೆಟಿಕ್ ಟ್ರ್ಯಾಕ್ ಅಳವಡಿಕೆ ಪ್ರಸ್ತಾವನೆ, ಸರ್ಕಾರದ ಮುಂದಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಖಾತೆ ಸಚಿವ ಡಾಕ್ಟರ ಜಿ. ಪರಮೇಶ್ವರ ಹೇಳಿದರು. ಬೆಂಗಳೂರು, ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತ, 5 ನೇ ಮಿನಿ ಕರ್ನಾಟಕ ಕ್ರೀಡಾಕೂಟ–2026 ರ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು, ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು. ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಕ್ರೀಡೆಯ ಬಗ್ಗೆ ಆಸಕ್ತಿ ಬೆಳೆಸಬೇಕು ಎಂದರು.

<><><>

ಧಾರವಾಡದ ರ್ಯಾಪಿಡ್ ಸಂಸ್ಥೆ, ಸಂಕ ್ಟದಲ್ಲಿರುವ ಮಹಿಳೆಯರಿಗೆ ಜೀವನೋಪಾಯದ ನಿಟ್ಟಿನಲ್ಲಿ ಸೂಕ್ತ ತರಬೇತಿ ನೀಡಿ, ಮಹಿಳಾ ನವೋದ್ಯಮಗಳಿಗೆ ಉತ್ತೇಜನ ಹಾಗೂ ಯುವ ಮಹಿಳಾ ಉದ್ಯಮದಾರರಿಗೆ ಪ್ರೋತ್ಸಾಹ ನೀಡುತ್ತಿದೆ. ರ್ಯಾಪಿಡ್

ಸಂಸ್ಥೆಯಡಿ ಹೊಲಿಗೆ, ಕಸೂತಿ, ಮೆಹಂದಿ ತರಬೇತಿ ಪಡೆದಿರುವ, ಧಾರವಾಡದ ಫಾತಿಮಾ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಫಾತಿಮಾ ಧ್ವನಿ– 41 ಸೆಕೆಂದುಗಳು

<><><>

ರಾಜ್ಯ ಸರ್ಕಾರ, ನೇಗಿಲ ಯೋಗಿ ಯೋಜನೆ ಮೂಲಕ, ಉಪಗ್ರಹ ಆಧಾರಿತ ತಂತ್ರಜ್ಞಾನ ಬಳಸಿ, ರೈತರಿಗೆ ಮಾಹಿತಿ ಒದಗಿಸುತ್ತಿದೆ ಎಂದು, ಕೃಷಿ ಖಾತೆ ಸಚಿವ ಪಿ.ಎಂ.ನರೇಂದ್ರ ಸ್ವಾಮಿ, ಕೊಡಗು ಜಿಲ್ಲೆ, ವಿರಾಜಪೇಟೆಯ, ಕೊಂಡಂಗೇರಿಯಲ್ಲಿ ತಿಳಿಸಿದ್ದಾರೆ.

<><><>

ರಾಯಚೂರಿನ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ, ವಿಕಸಿತ ಭಾರತ, ಯಂಗ್ ಲೀಡರ್ಸ್ ಡೈಲಾಗ್ ಸ್ಪರ್ಧೆಗೆ, ಕುಲಸಚಿವ ಡಾಕ್ಟರ್ ಎ.ಚನ್ನಪ್ಪ ಚಾಲನೆ ನೀಡಿದರು.

<><><>

ಬಳ್ಳಾರಿ ಜಿಲ್ಲೆ, ಅಂತರ್ಜಲ ಮಟ್ಟ, ಗಣನೀಯವಾಗಿ ಕುಸಿದಿದ್ದು, ಸಾರ್ವಜನಿಕರು ನೀರನ್ನು, ಹಿತಮಿತವಾಗಿ ಬಳಸುವಂತೆ, ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ, ಮನವಿ ಮಾಡಿದ್ದಾರೆ.

<><><>

ವಿಜಯಪುರ ಜಿಲ್ಲೆಯ, ಜಲಾಶಯಗಳ ಲಭ್ಯ ನೀರು, ಸಮರ್ಪಕವಾಗಿ ಎಲ್ಲ ಭಾಗಕ್ಕೂ ತಲುಪುವಂತೆ, ಯೋಜಿಸಲು, ಜಿಲ್ಲಾ ಉಸ್ತುವಾರಿ ಸಚಿವ, ಎಂ.ಬಿ. ಪಾಟೀಲ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

<><><>

ರಾಜ್ಯದಲ್ಲಿ ಐದು ಲಕ್ಷ ಜನಪದ ಕಲಾವಿದರಿದ್ದು, ಅವರ ಜ್ಞಾನವನ್ನು ದಾಖಲಿಸಿ, ಸಂಗ್ರಹಿಸುವ ಕಾರ್ಯ ಮಹತ್ವದ್ದಾಗಿದೆ ಎಂದು, ಜಾನಪದ ಪರಿ ತ್ತಿನ ಅಧ್ಯಕ್ಷ, ಪ್ರೊಫೆಸರ್ ಹಿ.ಚಿ. ಬೋರಲಿಂಗಯ್ಯ ಹೇಳಿದ್ದಾರೆ. ರಾಮನಗರದ ಜಾನಪದ ಲೋಕದಲ್ಲಿ, ಜಾನಪದ ಪರಿ ತ್ತಿನ ಆಯೋಜಿಸಿದ್ದ, ನಾಡೋಜ ಎಚ್. ಎಲ್ ನಾಗೇಗೌಡರ ನೆನಪಿನ, ತಿಂಗಳ ಅತಿಥಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಹಿರಿಯ ಸೋಬಾನೆ ಹಾಡುಗಾರ್ತಿ, ನಾಗಮ್ಮ ಅವರದ್ದು ಕಂಚಿನ ಕಂಠ. ಲೋಕಸಿರಿ ಮೂಲಕ ಪರಿ ತ್ತು ಗೌರವಿಸುತ್ತಿದೆ ಎಂದರು.

<><><>

ಧಾರವಾಡ, ಬೇಲೂರು ಕೈಗಾರಿಕಾ ಪ್ರದೇಶದ, ಸಮೀಪವಿರುವ, ಸತ್ಲೋಕ್ ಆಶ್ರಮದಲ್ಲಿ, ನಾಳೆಯಿಂದ ಮೂರು ದಿನಗಳ ಕಾಲ, ಮುನೀಂದ್ರ ಧರ್ಮಾರ್ಥ ಟ್ರಸ್ಟ್ ಹಾಗೂ ಸತ್ಲೋಕ್ ಆಶ್ರಮದ ವತಿಯಿಂದ, ಧಾರ್ಮಿಕ ಯಜ್ಞ, ರಕ್ತದಾನ ಶಿಬಿರ, ನಶಾ ಮುಕ್ತ ಜಾಗೃತಿ ಅಭಿಯಾನ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ